ಮಂತ್ರಿಯಾಗಿರಲಿ ಏನೇ ಆಗಿರಲಿ ನನಗೆ ಮನೆಯನ್ನು ಸರ್ಕಾರ ಕೊಟ್ಟಿಲ್ಲ. ಸಾಮಾಜಿಕ ನ್ಯಾಯವಾಗಿ ಅದನ್ನು ಕೊಡಬೇಕಾಗುತ್ತದೆ. ಅದನ್ನು ತಾವು ಒಪ್ಪಿಕೊಳ್ಳಿ. ಈ ಎರಡು ಮೂರು ವಿಚಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಮಾನ್ಯ ಮಂತ್ರಿಯವರು ಚಿತ್ರದುರ್ಗದಲ್ಲಿ ನಡೆದಂತಹ ಘಟನೆ ಬಗ್ಗೆ ಹೇಳಿಕೆಯನ್ನು ನೀಡುತ್ತಾರೆ.

5. ಮಂತ್ರಿಗಳ ಹೇಳಿಕೆ

ಹೊಳಲ್ಕೆರೆಯಲ್ಲಿ ಹರಿಜನ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿರುವುದರ ಕುರಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ದಿನಾಂಕ: 19.11.2000 ರಂದು ಸಂಜೆ ನಾಲ್ಕು ಗಂಟೆಗೆ ಶ್ರೀಮತಿ ಲಕ್ಷ್ಮಮ್ಮ ಕೋಂ ಶಿವಣ್ಣ ಉಪ್ಪರಿಗೆಹಳ್ಳಿ, ಇವರು ಹೊಳಲ್ಕೆರೆ ಠಾಣೆಗೆ ಹಾಜರಾಗಿ ಒಂದು ದೂರನ್ನು ನೀಡಿರುತ್ತಾರೆ. ದೂರಿನ ಸಾರಾಂಶ ಏನೆಂದರೆ ದಿನಾಂಕ: 18-11-2000ರಂದು ರಾತ್ರಿ ಎಂಟು ಗಂಟೆಗೆ ತಿಪ್ಪೇಸ್ವಾಮಿ ಮತ್ತು ಇತರೆ 30-40 ಜನರು ಅವರ ಮನೆ ಬಾಗಿಲನ್ನು ಮುರಿದು ಅವರನ್ನು ಅಮ್ಮಾಚ್ಚ ಶಬ್ದಗಳಿಂದ ಬಯ್ದು ಜಾತಿ ನಿಂದನೆ ಮಾಡಿ ಕೈಗಳಿಂದ ಹೊಡೆದು ಅವರನ್ನು ಬಲತ್ಕಾರವಾಗಿ ದೇವಸ್ಥಾನಕ್ಕೆ ಎಳೆದುಕೊಂಡು ಹೋಗಿ ದೇವರ ಮುಂದೆ ಪ್ರಮಾಣ ಮಾಡಲು ಬಲವಾಪ್ಯಾಸಿರುತ್ತಾರೆ. ಈ ಜನರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಮ್ಮ ದೂರಿನಲ್ಲಿ ಅವರು ಕೋರಿರುತ್ತಾರೆ. ಈ ದೂರಿನ ಮೇಲೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 362:2000 ಕಲಂ 143:47, 323, 354 ಐಪಿಸಿ ಮತ್ತು 301 ಸಿಆರ್ ಪಿಸಿ 10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯಿದೆ ಅಡಿಯಲ್ಲಿ ಒಂದು ಪ್ರಕರಣ ದಾಖಲು ಮಾಡಲಾಗಿರುತ್ತದೆ. ಹೊಳಲ್ಕೆರೆ ವಿಭಾಗದ

2.00 ಪಿ.ಎಂ.

ಡಿಎಸ್‌ಪಿಯವರು ಕೇಸಿನ ತನಿಖೆಯನ್ನು ನಡೆಸಿರುತ್ತಾರೆ. ತನಿಖೆಯಿಂದ ಫಿರ್ಯಾದಿ ಸೀರೆಯನ್ನು ಎಳೆದುಕೊಂಡು ಹೋಗುವಾಗ ಕಳಚಿರುತ್ತದೆಂದು ತಿಳಿದಿರುತ್ತದೆ. ವಿಷಯ ತಿಳಿದ ತಕ್ಷಣ ಚಿತ್ರದುರ್ಗ ಎಸ್‌ಪಿಯವರು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ. ಆರೋಪಿ ತಿಪ್ಪೇಸ್ವಾಮಿ ಇತರೆ 10 ಜನರನ್ನು ದಸ್ತಗಿರಿ ಮಾಡಲಾಗಿದೆ. ಊರಿನಲ್ಲಿ ಶಾಂತಿ ಭಂಗವಾಗದಂತೆ ಬಂದೋಬಸ್ತ್ ಮಾಡಲಾಗಿದೆ. ಫಿರ್ಯಾದುದಾರರಿಗೆ ಅವಶ್ಯಕ ರಕ್ಷಣೆಯನ್ನು ನೀಡಲಾಗಿದೆ, ಆದಷ್ಟು ಬೇಗ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ:- ಈ ಘಟನೆಯಲ್ಲಿನ ಮುಖ್ಯ ಆರೋಪಿಯನ್ನು ಬಂಧನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ ಈ ರೀತಿಯಾದ ಜವಾಬ್ದಾರಿಯನ್ನು ಡಿಎಸ್‌ಪಿಗಳಿಗೆ ಕೊಟ್ಟಿದ್ದೇವೆಂದು ಮಾನ್ಯ ಗೃಹಸಚಿವರು ಹೇಳಿದರು, ಕಾನೂನು ಇರುವುದು ಎಸ್‌ಪಿಗಳಿಗೆ, ಆದರೆ ತಾವು ಇಂತಹವರಿಗೆ ಶಿಕ್ಷೆ ಕೊಡುವಂತಹ ತುರ್ತಾಗಿರುವ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳದೆ ಹೋದರೆ ತಮ್ಮಿಂದ ಜನರಿಗೆ ಸರಿಯಾದ ಸಿಗ್ನಲ್ ಹೋಗುವುದಿಲ್ಲ. ಇವು ಆವ್ಯಾಹತವಾಗಿ ನಡೆದುಕೊಂಡೇ ಹೋಗುತ್ತವೆ. ಮಾನ್ಯ ಗೃಹಸಚಿವರಿಗೆ ಅಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಈ ವಿಚಾರದಲ್ಲಿ ಮಾತನಾಡುತ್ತೇನೆಂದು ಹೇಳಿದ್ದೆ, ಆದರೆ ತಾವು ತಮ್ಮ ಸ್ಥಾನವನ್ನು ಮೀರಿ ನನಗೆ ಗೌರವವನ್ನು ಕೊಟ್ಟು ನಾನೇ ನಿಮ್ಮಲ್ಲಿಗೆ ಬರುತ್ತೇನೆ, ಮಾತನಾಡೋಣವೆಂದು ಹೇಳಿದ್ದೀರಿ, ತಾವು ಬರುವ ಅವಶ್ಯಕತೆ ಇಲ್ಲ, ನಾನೇ ತಮ್ಮಲ್ಲಿಗೆ ಬರುತ್ತೇನೆ, ಏನೇನಾಗುತ್ತಿದೆ, ಯಾವ ರೀತಿ ವ್ಯವಸ್ಥೆಯನ್ನು ಸರಿಪಡಿಸಬಹುದು ಎನ್ನುವ ಬಗ್ಗೆ ಸಲಹೆಯನ್ನು ಕೊಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರಿನಲ್ಲಿ ಹೆಣ್ಣುಮಕ್ಕಳ ಸಾವು ಹೆಚ್ಚಾಗುತ್ತಿವೆ, ಬಹುಮಟ್ಟಿನವು ವರದಕ್ಷಣೆ ಸಾವಿನ ಪ್ರಕರಣಗಳಾಗಿವೆ, ಆದರೆ ಆಸಹಜ ಸಾವು ಎಂದು ಪ್ರಕರಣ ದಾಖಲಾಗುತ್ತಿದೆ. ಮಹಿಳಾ ಸಂಘಟನೆಯವರು ಬಂದು ತಮಗೆ ಮನವಿಯನ್ನು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ. ತಮಗೂ ಕೂಡ ಕೊಟ್ಟಿರಬಹುದೆಂದು ತಿಳಿದುಕೊಂಡಿದ್ದೇವೆ. ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರವಷ್ಟೆ ಅಲ್ಲ, ಕೊಲೆಗಳು ಕೂಡ ಹೆಚ್ಚಾಗುತ್ತಿವೆ. ಆದಕ್ಕೆ ಬಹುಶ : ಸಂಪೂರ್ಣ ಸಮಾಜ ಜವಾಬ್ದಾರಿಯಾಗಿರುತ್ತದೆ. ಆ ರೀತಿಯ ಘಟನಾವಳಿಗಳು ಪುನರಾವರ್ತನೆಯಾಗದಿರುವ ಹಾಗೆ ಆ ಆರೋಪಿಗಳನ್ನು ತಕ್ಷಣ ಬಂಧಿಸಿ ಕ್ರಮತೆಗೆದುಕೊಳ್ಳಬೇಕು. ಇದು ಡಿಎಸ್‌ಎಸ್ ಕಾರ್ಯಕರ್ತರ ಬೇಡಿಕೆ ಕೂಡ ಆಗಿದೆ. ಎರಡನೆಯದಾಗಿ, ಬೆಂಗಳೂರಿನಲ್ಲಿ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಹಾಗೂ ಆಸಹಜ ಸಾವು ಹೆಚ್ಚಾಗುತ್ತಿದೆ, ಇದರಕಡೆ ತಾವು ಗಮನಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದಂತೆ ಯಾವ ದಿವಸ ಘಟನೆ ನಡೆದಿದೆಯೋ ಅದೇ ದಿವಸ ನಮ್ಮ ಪೋಲಿಸ್‌ನವರು ಹೋಗಿ ಸುಮಾರು 10 ಜನರನ್ನು ದಸ್ತಗಿರಿ ಮಾಡಿ ಜ್ಯುಡಿಷಿಯಲ್ ಕಸ್ಟಡಿಯಲ್ಲಿಟ್ಟಿದ್ದಾರೆ. ನನಗೆ ಬಂಧ ಮಾಹಿತಿಯ ಪ್ರಕಾರ ದಸ್ತಗಿರಿ ಮಾಡಿರುವ ಆ 10 ಜನರ ಹೆಸರು ಈ ರೀತಿಯಾಗಿದೆ, ಮುಖ್ಯ ಆರೋಪಿ ತಿಪ್ಪೇಸ್ವಾಮಿ ಬಿನ್ ಕೆಂಪಯ್ಯ ಮಾಸ್ಟರ್, ಶಂಕರಪ್ಪ, ದಿನೇಶ, ಸ್ವಾಮಿ, ಇವರ ತಂದೆ ಕೆಂಪಾಪುರ, ಹನುಮಂತ, ಹಳೇ ತಿಪ್ಪಣ್ಣ, ಮಲ್ಲೇಗೌಡ, ಕಂಡಪ್ಪ ಹಾಗೂ ಪರಮೇಶ. ಇವರನ್ನು ದಸ್ತಗಿರಿ ಮಾಡಿ ಕೇಸ್ ಹಾಕಿ ಪೋಲಿಸ್‌ನವರು ತಕ್ಷಣ ಕ್ರಮ ಜರುಗಿಸಿದ್ದಾರೆ. ನಾನು ಈಗಾಗಲೇ ಮೇಲ್ಮನೆಯಲ್ಲೂ ಸಹ ಹೇಳಿದ್ದೇನೆ. ಈ ಎಸ್‌ಸಿ : ಎಸ್‌ಟಿ ಅಟ್ರಾಸಿಟಿ ಪ್ರಿವೆನ್‌ಷನ್ ಆಕ್ಟ್‌ನ ಪ್ರಕಾರ ಒಬ್ಬ ನೋಡಲ್ ಆಫೀಸರ್ ಆಗಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳನ್ನು

ನೇಮಕ ಮಾಡಿದ್ದೇವೆ. ನಾನು ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಸೇರಿ ಒಂದು ಸಭೆ ಮಾಡಿ ಇಂತಹ ಪ್ರಕರಣಗಳನ್ನು ರಿವ್ಯೂ ಮಾಡಬೇಕು, ತಕ್ಷಣ ಗೃಹ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಸಕ್ತಿ ವಹಿಸಿ ಎಲ್ಲೆಲ್ಲಿ ಇಂತಹ ಘಟನೆಗಳು ನಡೆಯುತ್ತವೆ ಅದನ್ನು ತಕ್ಷಣ ನಿಲ್ಲಿಸುವುದು, ಮತ್ತೊಂದು ಕಡೆ ಪರಿಹಾರ ಕೊಡುವುದು ಈ ಎರಡು ಕೆಲಸವನ್ನು ಮಾಡಬೇಕು. ಕೆಲವು ಕಡೆ ಇಡೀ ಊರೆ ಅನ್ಯಾಯ ಮಾಡಿದ್ದರೆ, ಅಂತಹವರ ಮೇಲೆ ಪ್ಯುನಿಟಿ ಫೈನ್ ಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಗೃಹಸಚಿವರ ಅಧ್ಯಕ್ಷತೆಯಲ್ಲಿ, ಈ ರೀತಿಯ ದಲಿತರ ಮೇಲೆ ನಡೆಯುವ ಅತ್ಯಾಚಾರ ಬಗ್ಗೆ ಅಟ್ರಾಸಿಟಿ ಪ್ರಿವೆನ್‌ಷನ್ ರಿವ್ಯೂ ಮಾಡಲು ಒಂದು ಸಮಿತಿ ಇದೆ. ಆ ಸಮಿತಿಯ ಸಭೆ ನಿರಂತರವಾಗಿ ನಡೆಯಬೇಕು, ಸಮಾನ್ಯವಾಗಿ ಕೇಸ್‌ಗಳು ಬುಕ್ ಆಗದೆ ಹೋಗುತ್ತವೆ, ಕಾರಣವು ಗೊತ್ತಿದೆ. ಆದುದರಿಂದ ಆ ಟೀತ್ ಅನ್ನು ಸರಿಯಾಗಿ ಉಪಯೋಗಿಸಕೊಳ್ಳತಕ್ಕಂಥ ಕೆಲಸವಾಗಬೇಕು. ಆ ಸಭೆಯಲ್ಲಿ ಪದೇ ಪದೇ ರಿವ್ಯೂ ಮಾಡುತ್ತಿದ್ದರೆ, ಜಿಲ್ಲೆಗಳಿಗೆ ಹೋದಾಗ ರಿವ್ಯೂ ಮಾಡುತ್ತಿದ್ದರೆ, that will give a good signal, thereby the society will get the protection.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಮಂತ್ರಿಗಳು ಸಭೆಯನ್ನು ಮಾಡಿದ್ದಾರೆ. ಆ ಆಕ್ಟ್ ಅನ್ನು ಒಂದು ದಿವಸ ಎಲ್ಲರೂ ಓದಿ, ಮುಖ್ಯಮಂತ್ರಿಗಳನ್ನು ಕೂಡ ಕರೆಯಿಸಿ, ನಾನು ಅವರು ಎಲ್ಲರೂ ಸೇರಿ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿ ಸಮಿತಿಗಳನ್ನು ರಚನೆ ಮಾಡಿ ಆದೇಶ ಹೊರಡಿಸಲಾಗಿದೆ. ನಾನೇನು ಹೇಳುತ್ತೇನೆಂದರೆ, ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ, ಎಲ್ಲ ಸಮಾಜದಲ್ಲೂ ಕೂಡ ಇದರ ಬಗ್ಗೆ ಕಳಕಳಿ ಇದ್ದು ಕೆಲಸ ಮಾಡುವ ಕಾರ್ಯಕರ್ತ ಜನ ಎಲ್ಲಾ ಪಕ್ಷದಲ್ಲಿ ಹಾಗೂ ಸಮಾಜದಲ್ಲಿರುವ ಅವಶ್ಯಕತೆ ಕೂಡ ಇದೆ. ಅನೇಕ ಸಾರಿ, ನಾವು ಪ್ರತ್ಯೇಕ್ಷವಾಗಿ ಅಥವಾ ಅಪ್ರತ್ಯೇಕವಾಗಿ ಪ್ರಚೋದನೆ ಮಾಡುತ್ತೇವೆ. ಆ ಭಾವನೆ ಇನ್ನೂ ಇದೆ, ಅದನ್ನು ನಾವು ಆದಷ್ಟು ರೆಸಿಸ್ಟ್ ಮಾಡುತ್ತಿದ್ದೇವೆ. ಸರ್ಕಾರದ ವತಿಯಿಂದ ಕೂಡ ಅದಕ್ಕೆ ನಾವು ಒತ್ತಾಯ ತರುತ್ತಿದ್ದೇವೆ. ಮತ್ತೆ ಈ ಸಮಿತಿಯನ್ನು ಪದೇ ಪದೇ ಕರೆಯಬೇಕೆನ್ನುವ ಆದೇಶವನ್ನು ಕೂಡ ಕೊಟ್ಟಿದ್ದೇವೆ. ಪುನಃ ಇದರ ಬಗ್ಗೆ ನಾನು ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಕೂಡಿ ಸಭೆ ಮಾಡಿ ಎಲ್ಲೆಲ್ಲಿ ಇಂತಹ ದೌರ್ಜನ್ಯಗಳು ನಡೆದಿವೆ ಅದರ ಬಗ್ಗೆ ರಿವ್ಯೂ ಮಾಡುತ್ತೇವೆ. ಮಾನ್ಯ ಸದಸ್ಯರು ಇದನ್ನು ಡಿಎಸ್‌ಪಿಗೆ, ಏತಕ್ಕೆ ವಹಿಸಲಾಯಿತು ಎಂದು ಹೇಳಿದರು, ಇಂತಹ ಅತ್ಯಾಚಾರಗಳು ಹೆಚ್ಚಿಗೆ ನಡೆದರೆ ಇಂತಹ ಪ್ರಕರಣಗಳನ್ನು ನೀವು ನಿಯಂತ್ರಣ ಮಾಡದಿದ್ದರೆ ನಿಮ್ಮ

ಮೇಲೆ ತಿಳಿಸಿದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಒಂದು ಎಚ್ಚರಿಕೆಯನ್ನು ಈ ಸದನದ ಮೂಲಕಾಂತರ ಕೊಟ್ಟಿದ್ದೇವೆ. ಎಲ್ಲಿಯವರಿಗೆ ನಾವು ಬಿಸಿ ತಟ್ಟಿಸುವುದಿಲ್ಲವೋ ಅಲ್ಲಿಯವರೆಗೆ ಈ ಕೆಲಸಗಳು ನಡೆಯುತ್ತವೆ, ಇದರ ಬಗ್ಗೆ ಯಾರೂ ಗಮನವನ್ನು ಕೊಡುವುದಿಲ್ಲ. ಇನ್ನೊಂದು ಕಡೆ ಕೆಲವು ಜನ ಪ್ರತಿಭಟನೆ ಕೂಡ ಮಾಡುತ್ತಿದ್ದಾರೆ, ಎಲ್ಲೆಂದರಲ್ಲಿ ಈ ಎಸ್‌ಸಿ/ಎಸ್‌ಟಿ ಪ್ರಮೋಷನ್ಸ್ ಆಕ್ಟ್ ತೆಗೆದುಕೊಂಡು ನಮಗೆ ಹೆದರಿಸ್ ಮಾಡುತ್ತಿದ್ದಾರೆ ಇದರ ದುರುಪಯೋಗವಾಗುತ್ತಿದೆ ಎಂದು ಕೆಲವು ಜನ ಕೆಲವು ಕಡೆ ಹೇಳುತ್ತಿದ್ದಾರೆ. ಆ ರೀತಿ ಅವರೇಕೆ ಹೇಳುತ್ತಿದ್ದಾರೆಂದರೆ, ಇದನ್ನು ಹತ್ತಿಕ್ಕಬೇಕು, ಅನ್ಯಾಯದ ವಿರುದ್ಧ ಯಾರೂ ಕೂಡ ತಮ್ಮ ಧ್ವನಿಯೆತ್ತಬಾರದೆಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಾವು ನಿಜವಾಗಿ 30 ವರ್ಷಗಳ ಕಾಲ ರಾಜಕಾರಣ ಮಾಡಿಕೊಂಡು ಈ ಸದನದ ಸದಸ್ಯರಾಗಿರುವಂಥ ಒಬ್ಬ ಪ್ರಾಮಾಣಿಕ ರಾಜಕಾರಣಿ ಆಮತ್ತು ಗೃಹಸಚಿವರಾಗಿದ್ದೀರಿ. ಸಮಾಜದಲ್ಲಿ ಇಂತಹ ಶಕ್ತಿಗಳನ್ನು ದಮನ ಮಾಡುವುದಕ್ಕೆ ಪೂರಕ ಕೆಲಸಗಳನ್ನು ಮಾಡಬೇಕೆಂದು ಹೇಳಿದಿರಿ. ನಿಮಗೊಂದು ಸಲಹೆ ಕೊಡುತ್ತೇನೆ, ಚಿತ್ರದುರ್ಗಾ ಜಿಲ್ಲೆಯಲ್ಲಿ ಮುರುಘರಾಜೇಂದ್ರ ಸ್ವಾಮಿಗಳಿದ್ದಾರೆ, ಅವರು ಬಹಳ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಸರ್ಕಾರ ಅಂತಹವರನ್ನು ಸಂಪರ್ಕಿಸಿ ಅವರಿಂದ ಕಾರ್ಯಕ್ರಮಗಳನ್ನು ಮಾಡಿಸಿ, ಖಂಡಿತವಾಗಿಯೂ ಇದನ್ನು ತಡೆಗಟ್ಟಲು ಸಹಾಯವಾಗುತ್ತದೆ. ಕಂಬಾಲಪಲ್ಲಿ ಘಟನೆಯ ಬಗ್ಗೆ ತಾವು ಅಲ್ಲಿಗೆ ಹೋಗಿದ್ದೀರಿ, ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೀರಿ. ಶ್ರೀರಂಗಪಟ್ಟಣದಲ್ಲಿ ಜೀತದಾಳುಗಳಿಗೆ ಸಂಬಂಧಿಸಿದಂತೆ ಸರ್ಕಾರ ಕೂಡಲೇ ಜಮೀನನ್ನು ಪಡೆದು ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಒಳ್ಳೆಯ ಕೆಲಸವನ್ನು ಮಾಡಿದೆ, ಅದನ್ನು ನಾವು ಒಪ್ಪುತ್ತೇವೆ. ಆದರೆ ಇದನ್ನು ತಡೆಗಟ್ಟಲು, ಲಾಂಗ್‌ರೇಂಜ್ ಕಾರ್ಯಕ್ರಮ ನಿಮ್ಮ ಕಾಲದಲ್ಲಾಗದಿದ್ದರೆ ಇನ್ಯಾರ ಕಾಲದಲ್ಲಾಗುತ್ತವೆ? ಅದಕ್ಕೆ ಏನು ಲಾಂಗ್‌ರೇಂಜ್ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಇಂತಹ ವ್ಯಕ್ತಿಗಳನ್ನು ತಾವು ಕರೆಯಿಸಿ ಅವರೊಡನೆ ಮಾತನಾಡಿ ಕೆಲಸ ಮಾಡಬೇಕೆಂದು ನಾನು ಗೃಹಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಅದಕ್ಕೆ ನಾನು, ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಟ್ಟು ಸ್ವಲ್ಪ ತಿಳಿವಳಿಕೆಯುಳ್ಳವರನ್ನು ವಿಚಾರವಂತರನ್ನು ಸೇರಿಸಿಕೊಂಡು ಎರಡು ವರ್ಗದವರಿಗೂ ಇರುವ ಹಕ್ಕುಬಾಧ್ಯತೆ, ಅವರನ್ನು ಹೇಗೆ ನೋಡಬೇಕೆನ್ನುವ ಅವೇರ್‌ನೆಸ್ ಕ್ಯಾಂಪ್ ಅನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಹಾಕಬೇಕೆಂದು ನಾವು ಯೋಚನೆ ಮಾಡಿದ್ದೇವೆ; ಸದ್ಯದಲ್ಲಿ, ಅದು ಕಾರ್ಯಗತವಾಗುವಂತೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಬೆಂಗಳೂರು ನಗರದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುವ ಅತ್ಯಾಚಾರದ ಬಗ್ಗೆಯೂ ಕೂಡ ಮಾನ್ಯ ಸದಸ್ಯರು ಮಾತನಾಡಿದರು,

ಅದರ ಬಗ್ಗೆಯೂ ಕೂಡ ವಿಶೇಷವಾಗಿ ಪೋಲೀಸ್ ಆಯುಕ್ತರೊಡನೆ ಒಂದು ಸಭೆಯನ್ನು ನಡೆಸಿ, ಸ್ವಂತಃ ಎಸ್‌ಜಿಒಸ್ ಸುಪರ್ದಿ ಮಾಡಿದ್ದೇವೆ, ಆಯುಕ್ತರ ಕಛೇರಿಯಲ್ಲಿ ಒಂದು ಸಣ್ಣ ಕಛೇರಿಯನ್ನು ಮಾಡಲಾಗಿದೆ. ನಿಮಗೆಲ್ಲಾ ಗೊತ್ತು, ತಮ್ಮ ಕಾಲದಲ್ಲೇ ಇದು ಆಗಿತ್ತು. ನಾನು ಅಲ್ಲಿಗೆ ಹೋಗಿ ಭೇಟಿ ನೀಡಿ ಅಲ್ಲಿ ಬಂದಿರತಕ್ಕಂಥ ಅಧಿಕಾರಿಗಳಿಗೆ ಯಾವ ರೀತಿಯಾಗಿ ಸ್ಪಂದಿಸಬೇಕು ಅಥವಾ ಅವರಿಗೆ ಯಾವ ರೀತಿಯಾಗಿ ಧೈರ್ಯ ತುಂಬಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಕೂಡ ನಾವು ಕ್ರಮ ಜರುಗಿಸುತ್ತೇವೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಈ ರೀತಿಯ ತೊಂದರೆಗಳು ಬೆಂಗಳೂರಿನಲ್ಲೂ ಆಗುತ್ತಿವೆ. ತಾವು ಒಂದು ಕಡೆಯೂ ವಿಸಿಟ್ ಮಾಡಿಲ್ಲ. ತಾವು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲೂ ಹೇಳಿದಿರಿ, ಬೆಂಗಳೂರು ನಗರವನ್ನು ಒಂದೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ನಮ್ಮಲ್ಲಿ ಈ ರೀತಿಯಾಗಿದೆ ಎಂದು ನೀವು ಒಂದು ದಿವಸವೂ ಬಂದು ನನ್ನನ್ನು ನೋಡಲಿಲ್ಲ. ಇಂಥ ಅನ್ಯಾಯವಾಗಿದೆ ಅಥವಾ ಇಂಥ ತೊಂದರೆಯಾಗಿದೆ ಎಂದು ನೀವು ಒಂದು ದಿವಸವೂ ಬಂದು ನನ್ನನ್ನು ಕರೆದುಕೊಂಡು ಹೋಗಲಿಲ್ಲ. ನೀವು ನನ್ನ ಬಳಿ ಬಂದಿದ್ದೇ, ಒಬ್ಬ ಇನ್ಸ್‌ಪೆಕ್ಟರ್ ಸರಿಯಾಗಿಲ್ಲ, ಅವನನ್ನು ತೆಗೆಯಿರಿ ಎನ್ನುವುದಕ್ಕಾಗಿ, ಹೀಗಾದರೆ ನಾನು ಏನು ಮಾಡಲಿ?

ಶ್ರೀ ಪಿ. ರಮೇಶ್ :— ಹೊಳಲ್ಕೆರೆಯಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ಸನ್ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಇಂಥ ಘಟನೆ ಆಗುತ್ತದೆ ಎಂದು ಆರೋಪಿಗಳ ಬಗ್ಗೆ ಸುಳಿವು ಕೊಟ್ಟರೂ, ಅಲ್ಲಿನ ಲೋಕಲ್ ಪೋಲೀಸ್ ಅಧಿಕಾರಿಗಳು ಆರೋಪಿಗಳ ಮನೆಗಳಿಗೇ ಹೋಗಿ ಬಳಿತುಕೊಳ್ಳುವುದು, ಅಲ್ಲಿ ಖಾಫಿ ಕುಡಿಯುವುದು, ಅವರಿಗೆ ಸಹಕಾರ ಕೊಡುವ ರೀತಿಯಲ್ಲಿ ಅವರು ತೋರಿದ ವರ್ತನೆ, ದೌರ್ಜನ್ಯದ ಮನೋಭಾವನೆಗೆ ಪ್ರಚೋದನೆ ಕೊಡುವಂಥ ಸನ್ನಿವೇಶಗಳನ್ನು ಉಂಟು ಮಾಡಿದ್ದಕ್ಕಾಗಿ ಈ ರೀತಿಯ ಘಟನೆಯಾಯಿತು ಎಂದರೆ ತಪ್ಪಾಗಲಾರದು. ನಾನು ಸೋಮವಾರದ ದಿವಸ ಅಧಿವೇಶನವನ್ನು ಬಿಟ್ಟು ನನ್ನ ಕ್ಷೇತ್ರಕ್ಕೆ ಹೋಗಿ, ಇಂಥದ್ದು ಮತ್ತೆ ಮರುಕಳಿಸಬಾರದು ಎಂದು, ಇಬ್ಬರನ್ನೂ ಕರೆಯ ದೇವಸ್ಥಾನದಲ್ಲಿ ಕೂಡಿಸಿ ಮಾತನಾಡಿ ಬಂದಿದ್ದೇನೆ. ಅಲ್ಲಿನ ಹಿಂದುಳಿದ ವರ್ಗದ ಜನ ಹೇಳುವುದು ಏನೆಂದರೆ, ಆರೋಪಿಗಳ ಬಗ್ಗೆ ಹೇಳಿದರೂ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು, ಹೇಳಲು ಬಂದವರನ್ನೇ ಬಯ್ದು, ಆರೋಪಿಗಳ ಮನೆಗೆ ಹೋಗಿ ಅಲ್ಲಿ ಊಟ ತಿಂಡಿ ಮಾಡಿ, ಹೋಗಿ ಅಲ್ಲಿನ ಕಂಬ ಕಿತ್ತುಕೊಳ್ಳಿ, ಇನ್ನೊಂದು ಸಾರಿ ಅಲ್ಲಿ ಕಂಬ ಹಾಕಿದರೆ ಆಯಿತು ಎನ್ನುವ ಮಾತನ್ನು ಅಲ್ಲಿನ ಪೋಲೀಸ್ ಅಧಿಕಾರಿಗಳು ಹೇಳಿದ ಮೇಲೆ ಇವರು ಕಂಬ ಕಿತ್ತುಕೊಳ್ಳುವಂಥ

ಕೆಲಸ ಮಾಡಿದರು. ಅವರಿಗೆ ನ್ಯಾಯಯುತವಾಗಿ ಬೇಕಾಗಿದಂಥ ಕಂಬವನ್ನು ಬೇರೆಯವರ ಮುಖಾಂತರ ಕೊಡಿಸಬಹುದಾಗಿತ್ತು. ಆದರೆ. ಇವರೇ ಪ್ರಚೋದನೆ ಕೊಟ್ಟು, ಎಸ್. ಸಿ. ಃ ಎಸ್. ಟಿ. ಕಾರ್ಪೋರೇಷನ್‌ನಿಂದ ಕೊಟ್ಟಂಥ ಕಂಬವನ್ನು ಕೀಳಿಸುವಂಥ ಕೆಲಸವನ್ನು ಮಾಡಿ, ಅಕ್ರಮಗಳಿಗೆ ಕಾರಣರಾದರು. ಅಲ್ಲಿನ ಎಸ್. ಪಿ.ಯವರು ಕ್ರಮ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅಲ್ಲಿನ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕಿದರು. ಅವರು ಅನೇಕರ ಕಪಿಮುಷ್ಟಿಯಲ್ಲಿ ಸಿಕ್ಕಿರುತ್ತಾರೆ. ಅಲ್ಲಿ ಕ್ರಮ ತೆಗೆದುಕೊಳ್ಳಲು ಎಸ್. ಪಿ.ಯವರು ಆದೇಶ ಕೊಟ್ಟಂಥ ಕ್ರಮಗಳನ್ನು ಮೊದಲು ಅವರೇ ತೆಗೆದುಕೊಂಡಿದ್ದರೆ, ಒಳ್ಳೆಯದಾಗುತ್ತಿತ್ತು. ಆ ಪೋಲೀಸ್ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ಕೈಗೊಳ್ಳುವಿರಿ ಎನ್ನುವುದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ ಃ- ಒಂದು ಕಡೆ, ಎಲ್ಲಿ ಪೋಲೀಸ್ ಅಧಿಕಾರಿಗಳು ಕ್ವಿಕ್ ಆ್ಯಕ್ಷನ್ ತೆಗೆದುಕೊಳ್ಳುತ್ತಾರೆ. ಅಂಥವರನ್ನು ಸಸ್ಪೆನ್‌ಷನ್‌ನಲ್ಲಿ ಇಡಿ ಎಂದು ಹೇಳುತ್ತಾರೆ. ಮಂಡ್ಯದಲ್ಲಿ ನಡೆದ ಘಟನೆಯ ಬಗ್ಗೆ ವರದಿ ಬಂದಿದೆ. ಆಟ್ರಾಸಿಟಿ ಕೇಸ್‌ನಲ್ಲಿ ಅಲ್ಲಿನ ಡಿ. ವೈ. ಎಸ್. ಪಿ. ಕ್ವಿಕ್ ಆ್ಯಕ್ಷನ್ ತೆಗೆದುಕೊಂಡಿದ್ದಕ್ಕಾಗಿ ಅವನನ್ನು ಸಸ್ಪೆಂಡ್ ಮಾಡಿ, ಅಪಸಸ್ಥ ಟ್ರಾನ್ಸ್‌ಫರ್ ಮಾಡಿ ಎನ್ನುವ ವಿಚಾರ ಬಂದಿದೆ. ಕ್ವಿಕ್ ಆ್ಯಕ್ಷನ್ ತೆಗೆದುಕೊಳ್ಳುವ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುವುದು ಒಂದು ಕಡೆಯಾದರೆ, ಡಿಲೇ ಆಯಿತು, ಆ್ಯಕ್ಷನ್ ತೆಗೆದುಕೊಳ್ಳಿ ಎಂದು ಇನ್ನೊಂದು ಕಡೆ ಹೇಳುತ್ತಾರೆ. ಹೊಳಲ್ಕೆರೆ ಪ್ರಕರಣದಲ್ಲಿ ಕ್ರಮ ತೆಗೆದುಕೊಳ್ಳಲು ವಿಳಂಬವಾಯಿತು. ಎಂದು ಇವರು ಹೇಳುತ್ತಿದ್ದಾರೆ, ಆದರೆ ಅದೇ ದಿನ ರಾತ್ರಿ ಎಸ್. ಪಿ.ಯವರು ಅಲ್ಲಿಗೆ ಹೋಗಿ ಕೃಷ್ಣಪ್ಪ ಎನ್ನುವ ಮಾಸ್ತರರನ್ನು ಮತ್ತು ಇತರ 9 ಜನರನ್ನು ಹಿಡಿದು ಒಳಗೆ ಹಾಕಿದ್ದಾರೆ. ಘಟನೆ ನಡೆದ 4 ಗಂಟೆಗಳೊಳಗೆ ಅವರು ಅಲ್ಲಿಗೆ ಹೋಗಿದ್ದಾರೆ. ಅವರು ಬೇರೆ ರೀತಿಯಿಂದ, ಅಲ್ಲಿನ ಇನ್ಸ್‌ಪೆಕ್ಟರ್ ಸರಿಯಿಲ್ಲ, ಅವರನ್ನು ತೆಗೆಯಿರಿ ಎಂದು ಹೇಳುತ್ತಿದ್ದಾರೆ, ಅದನ್ನು ಯೋಚನೆ ಮಾಡೋಣ. ಅದನ್ನು ರೆಕಾರ್ಡ್ ತರಿಸಿ ನೋಡಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ ಃ- ಇಂದಿನ ಪಟ್ಟಿಯಲ್ಲಿ ಬಾಡಿಗೆ ವಿಧೇಯಕ ಮತ್ತು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಎರಡು ವಿಧೇಯಕಗಳಿವೆ. ಬಾಡಿಗೆ ವಿಧೇಯಕದ ಅವಧಿ ಮುಗಿಯುತ್ತಿರುವುದರಿಂದ ಅದನ್ನು ಇವತ್ತು ಪಾಸ್ ಮಾಡಲೇಬೇಕಾಗಿದೆ. ಧಾರ್ಮಿಕ ಸಂಸ್ಥೆಗಳ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ವಿಧೇಯಕದಲ್ಲಿ ಬಹಳ ವಿಷಯಗಳಿಲ್ಲ ಅದನ್ನು 5-10 ನಿಮಿಷದಲ್ಲಿ ಮುಗಿಸಬಹುದು. ಆದರೆ ಮಾನ್ಯ ಚಿಮ್ಮನಕಟ್ಟಿಯವರ ವಿಧೇಯಕದ ಬಗ್ಗೆ ಬಹಳಷ್ಟು ಸದಸ್ಯರು ಭಾಗವಹಿಸುವವರಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಅದು ಇವತ್ತು ಇಲ್ಲಿ ಚರ್ಚೆಯಾಗಿ, ನಂತರ ವಿಧಾನ ಪರಿಷತ್ತಿಗೆ ಹೋಗಿ ಇವತ್ತು ಸಾಯಂಕಾಲದೊಳಗೆ

ಪಾಸ್ ಮಾಡಲು ಸಾಧ್ಯವಾಗುವುದಿಲ್ಲ.

ಅದಕ್ಕಾಗಿ ಅದನ್ನು ಮುಂದಕ್ಕೆ ಹಾಕಿ, ಉಳಿದ ಮೂರು ವಿಧೇಯಕಗಳನ್ನು ತೆಗೆದುಕೊಂಡು ಮುಗಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈ ಬಗ್ಗೆ ಕಾನೂನು ಸಚಿವರನ್ನು ಕೇಳೋಣ.

ಅಧ್ಯಕ್ಷರು :- ಆಯಿತು, ಊಟವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಎ. ಆರ್. ಕೃಷ್ಣಮೂರ್ತಿಯವರು ಮತ್ತು ಮಾನ್ಯ ಸಿ. ಗುರುಸ್ವಾಮಿಯವರು, ಅವರ ಕ್ಷೇತ್ರಗಳಲ್ಲಿ ಅವಮಾನವಾಗಿದೆ ಎಂದು ತಮ್ಮ ಗಮನಕ್ಕೆ ತಂದು ಒಂದು ತಿಂಗಳಾಯಿತು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು, ಅವರು ತಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸ ಮಾಡುವುದು ಕಷ್ಟವಾಗುತ್ತಿದೆ. ಇವತ್ತಾದರೂ ಮಾನ್ಯ ಗೃಹಸಚಿವರು ಅವರಿಬ್ಬರನ್ನೂ ತಮ್ಮ ಕಛೇರಿಗೆ ಕರೆಸಿ ಮಾತನಾಡಿ, ಅವರಿಗೆ ಅವಮಾನ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ :- ನಿನ್ನೆಯ ದಿವಸ ನಾನೇ ಅಧ್ಯಕ್ಷರನ್ನು ಕೇಳಿಕೊಂಡಿದ್ದೇನೆ. ದಯವಿಟ್ಟು ಅವರನ್ನು ಕರೆಸಿ ಮಾತನಾಡಿ, ಇದನ್ನು ಸೆಟಲ್ ಮಾಡಿ ಎಂದು ಹೇಳಿದ್ದೇನೆ.

ಅಧ್ಯಕ್ಷರು :- ಇದಾದಮೇಲೆ, ಅವರಿಬ್ಬರನ್ನೂ ಕರೆಸಿ ಮಾತನಾಡುತ್ತೇನೆ ಎಂದು ಬಿ.ಎ. ಸಿ.ಯಲ್ಲಿ ಸಿ. ಎಂ. ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಅವರನ್ನು ಕರೆಸಿ ಮಾತನಾಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಆದರೆ ಅದು ಆಗಿಲ್ಲ, ನಿನ್ನೆ ಮತ್ತೆ ಒಂದು ಘಟನೆ ಆಗಿದೆ. ಇದು ಪೆಂಡಿಂಗ್ ಬೀಳುತ್ತಿದೆ. ಇವತ್ತು ಸಾಯಂಕಾಲದೊಳಗೆ ಇದು ಬಗೆಹರಿದರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಇಂಥವು ರಿಪೀಟ್ ಆಗುತ್ತಿರುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತೇನೆ ತಾವು ಸ್ವಲ್ಪ ಸಮಯ ಕೊಡಿ.

ಶ್ರೀ ಎನ್. ಯೋಗೀಶ್ ಭಟ್ :- ನನ್ನದೊಂದು ವಿಚಾರವಿತ್ತು, ಅದಕ್ಕೆ ಉತ್ತರ ಬರಲಿಲ್ಲ.

ಅಧ್ಯಕ್ಷರು :— ನಾವು ಈಗಾಗಲೇ ಕುಳಿತಿರುವ ಪತ್ರವನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿದ್ದೇವೆ. ಊಟವಾದ ಮೇಲೆ ಬಂದು ಉತ್ತರ ಹೇಳುತ್ತಾರೆ. ಊಟವಾದ ಮೇಲೆ ಮತ್ತೆ ಸಭೆ ಸೇರೋಣ. ಈಗ ಸಭೆಯನ್ನು ಮುಂದೂಡಿದ್ದು ಪುನಃ 3.30ಕ್ಕೆ ಸೇರುತ್ತದೆ.

(ಸಭೆಯು 2.17ಕ್ಕೆ ಮುಕ್ತಾಯಗೊಂಡು, ಪುನಃ 3.30ಕ್ಕೆ ಸೇರಲು ನಿಶ್ಚಯಿಸಿತು)

(ಸದನವು 3-50ಕ್ಕೆ ಪುನಃ ಪ್ರಾರಂಭವಾದಾಗ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

6. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದು)

(8) ಕರ್ನಾಟಕ ಬಾಡಿಗೆ ವಿಧೇಯಕ 1999.

+ ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ತಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ಬಾಡಿಗೆ ನಿಯಂತ್ರಣ ಮಸೂದೆಯನ್ನು ಸಭೆಯ ಅಂಗೀಕಾರಕ್ಕೆ ಇಟ್ಟಂಥ ಸಂದರ್ಭದಲ್ಲಿ, ನಮ್ಮ ವಿರೋಧ ಪಕ್ಷದ ನಾಯಕರು ಕೆಲವು ವಿಷಯಗಳನ್ನು ಮಾತನಾಡಬೇಕೆಂದು ಒತ್ತಾಯ ಮಾಡಿದರು. ಇದು ಬಹಳ ಮುಖ್ಯವಾದ ಮಸೂದೆಯಾಗಿದೆ, ಗೇಣಿದಾರರ ಮತ್ತು ಮಾಲೀಕರ ಇಬ್ಬರ ಹಿತವನ್ನು ಕಾಪಾಡಲು ಈ ಮಸೂದೆಯನ್ನು ಮಾಡಿದ್ದೇವೆ. ಹಿಂದೆ ಮಾಲೀಕರು ಮನೆಗಳನ್ನು ಬಾಡಿಗೆ ಕೊಟ್ಟು ಅವರು ಅನುಭವಿಸುತ್ತಿದ್ದ ಕಷ್ಟ ಪರಿಸ್ಥಿತಿಗೆ ಪೂರ್ಣವಾಗಿ ವಿನಾಯಿತಿ ಸಿಕ್ಕಿದೆ. ನಮ್ಮ ವಿರೋಧ ಪಕ್ಷದ ನಾಯಕರು ಮುಂದೆ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರೂ ಸಹ ನಾವು ಅಂಗೀಕಾರ ಮಾಡಿಸಬಹುದು ಎನ್ನುವ ಭರವಸೆಯ ಮೇಲೆ ಅವರು ಸಮ್ಮತಿಸಿದ್ದಾರೆ. ಈ ಮಸೂದೆಯನ್ನು ಮಾನ್ಯ ಸೋಮಶೇಖರರೆಡ್ಡಿಯವರೇ ಪ್ರಸ್ತಾಪ ಮಾಡಿದ್ದರು. ಅವರು ಈ ಬಿಲ್‌ನ್ನು ವಿಧಾನ ಪರಿಷತ್ತಿನಲ್ಲಿ, ಮಂಡಿಸಿ ಅಂಗೀಕಾರ ಆಗುವುದಕ್ಕಿಂತ ಮುಂಚೆಯೇ ಅವರ ಸರ್ಕಾರ ಹೋಯಿತು. ಹೀಗಾಗಿ ಆ ಬಿಲ್ ನಮ್ಮ ಪಾಲಿಗೆ ಬಂದಿದೆ. ಮಾನ್ಯ ಸೋಮಶೇಖರರೆಡ್ಡಿಯವರು, ಮಾನ್ಯ ಸಿದ್ಧಾಪುರದವರು, ಮಾನ್ಯ ನಾಣಯ್ಯನವರು, ಎಲ್ಲರೂ ಸೇರಿ ಈ ವಿಧೇಯಕವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಬಹುಪಾಲು ಕೇಂದ್ರದ ವಿಧೇಯಕ ಏನಿದೆ ಅದನ್ನು ಅನುಸರಿಸಿ ಮಾಡಿರುವುದಕ್ಕೆ ಒಳ್ಳೆಯ ಸ್ವಾಗತ ದೊರೆತಿದೆ. ಇದರ ವಿಚಾರವಾಗಿ ಮಾನ್ಯ ಸೋಮಶೇಖರರೆಡ್ಡಿಯವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಬಹಳ ಮುಖ್ಯವಾದ ಕೆಲವು ಅಂಶಗಳನ್ನು ಒಪ್ಪಿದರೆ ಸರ್ವಾನುಮತದಿಂದ ಇದು ಅಂಗೀಕಾರವಾಗುತ್ತದೆಂದು ಹೇಳಿದರು. ಬಹು ಮುಖ್ಯವಾಗಿ ಹೋಟೆಲ್ಸ್ ಮತ್ತು ರೆಸ್ಟಾರೆಂಟ್‌ಗೆ ಫೇರ್ ರೆಂಟ್ ಅನ್ನು ಫಿಕ್ಸ್ ಮಾಡಬೇಕೆನ್ನುವ ಸಲಹೆ ಕೊಟ್ಟರು. ಈ ಒಂದು ಶಾಸನ ಮೊದಲೇ ಇತ್ತು. ಆದರೂ ಅದು ಯಶಸ್ವಿಯಾಗಲಿಲ್ಲ. ಮುಂದೆ ಕೂಡ ಆದಾಗಬೇಕಾದರೆ ಕಷ್ಟ ಇದೆ.